# ರಿಚ್ಮಂಡ್ ಪಾರ್ಕ್ ಲಂಡನ್ ಹಿರಿಮೆಯ ಗ್ರೀನ್‌ಟವರ್



ಅಭಯಾರಣ್ಯದಲ್ಲಿನ ಈ ಜಿಂಕೆಗಳಿಗೆ ಯಾರ ಭಯವೂ ಇಲ್ಲ

ಹಲವು ಭಾರತೀಯರ ಪಾಲಿಗೆ 'ಲಂಡನ್' ಮತ್ತು 'ಇಂಗ್ಲೆಂಡ್' ಪರ್ಯಾಯ ಪದಗಳಾಗಿವೆ. ಉದಾಹರಣೆಗೆ, ಇಂಗ್ಲೆಂಡಿನಲ್ಲಿದ್ದಾರೆ ಎನ್ನುವ ಬದಲು ಲಂಡನ್‌ನಲ್ಲಿದ್ದಾರೆ ಎಂದು ಹೇಳುವುದೇ ಅಭ್ಯಾಸ. ಅಷ್ಟರಮಟ್ಟಿಗೆ ಇಂಗ್ಲೆಂಡ್ ದೇಶವನ್ನು ಪ್ರತಿನಿಧಿಸುವ 'ಲಂಡನ್' ಮಹಾನಗರ ಹಲವು ಅದ್ಭುತಗಳ ಆಗರ.

ಪ್ರಪಂಚದಲ್ಲಿಯೇ ಒಂದು ಶ್ರೀಮಂತ ವಾಣಿಜ್ಯಕೇಂದ್ರವೆಂದು ಹೆಸರುವಾಸಿಯಾಗಿರುವ ಲಂಡನ್ ನಗರ ಬಹಳ ದುಬಾರಿ ಸ್ಥಳವೂ ಸಹ. ಪ್ರತಿ ಅಂಗುಲ ನೆಲಕ್ಕೂ ಚಿನ್ನದಷ್ಟು ಬೆಲೆ. ಒಂದು ತಿಂಗಳು ಪೂರಾ ಲಂಡನ್‌ನಲ್ಲೇ ಇದ್ದರೂ ನೋಡುವಂತಹ ಸ್ಥಳಗಳು ಇಲ್ಲಿ ಬೇಕಾದಷ್ಟಿವೆ. ಮ್ಯೂಸಿಯಂಗಳು, ಲೈಬ್ರರಿಗಳು, ಸ್ಮಾರಕಗಳು, ಚಾರಿತ್ರಿಕ ಕಟ್ಟಡಗಳು, ಥಿಯೇಟರ್‌ಗಳು, ಮನರಂಜನಾ ಕ್ಷೇತ್ರಗಳು, ಚರ್ಚುಗಳು, ಆಧುನಿಕ ಕಟ್ಟಡಗಳು, ಅರಮನೆಗಳು, ಸಾಮಂತರ ಪುಟ್ಟ ಅರಮನೆಗಳು, ಭೂತ ಕಾಡುವ ಮಂದಿರಗಳು, ಉದ್ಯಾನವನಗಳು, ಮೃಗಾಲಯಗಳು, ರಾಯಲ್ ಪಾರ್ಕುಗಳು – ಹೀಗೆ ದೊಡ್ಡ ಪಟ್ಟಿಯೇ ಬೆಳೆಯುತ್ತದೆ. ಆದರೆ, ಈ ಆಧುನಿಕ, ಭಾರೀ